ಯನ್ನು ನಾನು ತಿರಸ್ಕಾರ ಮಾಡಿದ್ದೇನೆ. ಮತ್ತೆ ಈ ರೆಸಲ್ಯೂಷನ್ (ಬಂದಾಗ ಬೇಕಾದರೆ ಚರ್ಚೆ ಮಾಡೋಣ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನನ್ನ ಇನ್ನೊಂದು ವಿಷಯ ಇತ್ತು. ಅದರ ಬಗ್ಗೆ ಹೇಳುತ್ತೀರಾ?

ಅಧ್ಯಕ್ಷರು.— ನಸ್ಟೀಂಬರ್‌ಗೆ ಬರಂತ್ತೀರಲ್ಲಾ ಆಗ ಮಾತನಾಡೋಣ. ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆ

ಅಧ್ಯಕ್ಷರು.— ಶ್ರೀ ಆರ್. ವೆಂಕಟರಾಮಯ್ಯ (ಸದಸ್ಯರು ಹಾಜರಿಲ್ಲ)

ಚಿಂತಾಮಣಿಯಲ್ಲಿ ನಡೆದ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ ಕಣ್ಣು ಕಳೆದುಕೊಂಡವರಿಗೆ ಪರಿಹಾರ ಒದಗಿಸುವುದು.

ಶ್ರೀ ಬಿ ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಅಧ್ಯಕ್ಷರೆ ಚಿಂತಾಮಣಿಯಲ್ಲಿ ನಡೆಸಿದ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ ಕಣ್ಣು ಹೋಗಿರುವವರಿಗೆ ಸರ್ಕಾರವು ಕೈಗೊಂಡಿರುವ ಪರಿಹಾರ ಕ್ರಮಗಳ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಗಮನವನ್ನು ನಾನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು) — ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಈಗಾಗಲೇ ನ್ಯಾಯಾಲಯದಲ್ಲಿ ಒಂದು ಮೊಕದ್ದಮೆ ಇದೆ. ಮತ್ತೆ ಇದಕ್ಕೆ ಸಂಬಂಧಪಟ್ಟ ಹಾಗೆ ಒಬ್ಬರು ಆಂಧ್ರಪ್ರದೇಶದಲ್ಲಿ ಉನ್ನತ ಸೇವೆಯನ್ನು ಪಡೆದಿರುವ ಪದ್ಮಭೂಷಣ ಡಾ॥ ಸಿ.ಆರ್. ರೆಡ್ಡಿಯವರಿಗೆ ವಿಚಾರಣೆ ಮಾಡಿಯೆಂದು ಅವರನ್ನು ಕೇಳಿಕೊಂಡಿದ್ದೇವೆ. ಈ ಗಾಗಲೇ ಅವರು ಕಾರ್ಯರಂಭ ಮಾಡಿದ್ದಾರೆ. ಅದು ಬಂದ ಮೇಲೆ ನಾನು ಪೂರ್ಣವಾದ ಹೇಳಿಕೆಯನ್ನು ಕೊಡಲು ಸಾಧ್ಯವಾಗುತ್ತದೆ.

† ಶ್ರೀ ಬಿ. ಎಸ್. ಯಡಿಯೂರಪ್ಪ.— ಸನ್ಮಾನ್ಯ ಅಧ್ಯಕ್ಷರೆ, ಒಂದು ತುಂಬಾ ಗಂಭೀರವಾದ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇವತ್ತು ಇದು ಅತ್ಯಂತ ಗಂಭೀರವಾದ ಪ್ರಕರಣ ಸರ್ಕಾರಿ ನೇತ್ರ ಚಿಕಿತ್ಸಾ ವೈದ್ಯರು ನಂಬಿಕೆ ಕಳೆದುಕೊಳ್ಳುವಂತಹ ಸ್ಥಿತಿ ಇವೊತ್ತು ಬಂದಿದೆ. ಬೆಂಗಳೂರು ನಗರದ ಸಂಚಾರಿ ಕಣ್ಣಾಸ್ಪತ್ರೆ ಘಟಕದವರು ಜನವರಿ ೨೮, ೨೯ ರಂದು ಚಿಂತಾಮಣಿಯಲ್ಲಿ ನಡೆಸಿದ ಚಿಕಿತ್ಸೆಯ ನಂತರ ೬೫ ಜನರು ಕಣ್ಣುಗಳನ್ನು ಕಳೆದುಕೊಂಡಿದ್ದಾರೆ. ನಾನು ಪ್ರಸ್ತಾಪ ಮಾಡುತ್ತಿರುವುದು ಏಕಕ್ಕೆ ಅವರು ಕಣ್ಣು ಕಳೆದುಕೊಂಡರು, ಇದಕ್ಕೆ ಕಾರಣವೇನು ಎನ್ನುವುದಕೋಸ್ಕರವಲ್ಲ. ಈ ರೀತಿ ಆ ನಿರ್ಭಾಗ್ಯ ಜನರ ಮುಂದಿನ ಭವಿಷ್ಯವೇನು ? ೬೫ ಕುಟುಂಬದವರಿಗೆ ತಲೇನಾದರೂ ಸರಿಯಾದ ರೀತಿಯಲ್ಲಿ ತಿಂಗಳಿಗೆ ೫೦೦ ರೂಪಾಯಿಗಳನ್ನು ಮಾಸಾಶನ ಕೊಟ್ಟು ಅವರು ಬದುಕುವುದಕ್ಕೆ ದಾರಿ ಮಾಡಿ ಕೊಡುತ್ತೀರಾ ? ಅಲ್ಲಿರತಕ್ಕಂಥ ವೈದ್ಯಾಧಿಕಾರಿಗಳನ್ನು ಅಲ್ಲಿಂದ ವರ್ಗಾವಣೆ ಮಾಡಿದ್ದೀರಾ ? ಮತ್ತೆ ಆಪರೇಷನ್ ಆಗಿ ೬೫ ನಿಮಿಷದಲ್ಲಿ ಒಬ್ಬ ಸತ್ತಿದ್ದಾನೆ. ಅವನ ಮುಂದಿನ ಜೀವನದ ಹೆಂಡತಿ ಮಕ್ಕಳ ಭವಿಷ್ಯವೇನು ? ಅದರ ಬಗ್ಗೆ ಚರ್ಚೆಯಾಗಿಲ್ಲ. ತಾವು ಇವಕ್ಕೆ ಕೇವಲ ಒಂದು ಸಾವಿರ ರೂಪಾಯಿಗಳನ್ನು ಪರಿಹಾರ ಕೊಟ್ಟಿದ್ದೀರಿ. ಯಾವುದೇ ಕಾರಣಗಳಿಂದ ಇನ್ನು ಮುಂದೆ ಈ ರೀತಿ ಆಗಬಾರದೆಂದು ಸರ್ಕಾರಕ್ಕೆ ಇಚ್ಛೆಯಿದೆ, ನಾನು ಅದನ್ನು ಡೌಟ್ ಮಾಡುತ್ತಿಲ್ಲ. ಈ ಪ್ರಕರಣದ ಹಿನ್ನೆಲೆ ಏನು, ಇದಕ್ಕೆ ಕಾರಣವೇನು ಎಂಬುದನ್ನು ಕಂಡುಹಿಡಿಯುವುದಕೋಸ್ಕರ ಒಂದು ಸಮಿತಿ ಮಾಡಿ ಒಬ್ಬ ತಜ್ಞರನ್ನು ನೇಮಕ ಮಾಡಿ ವರದಿ ಕೊಡಿ ಎಂದು ಹೇಳಿದ್ದೀರಿ. ಅದರ ಬಗ್ಗೆ ಪ್ರಶ್ನೆ ಇಲ್ಲ. ನಾನು ಪ್ರಶ್ನೆ ಮಾಡುತ್ತಿರುವುದು ಒಂದೇ ಒಂದು ಉದ್ದೇಶ, ಏನೆಂದರೆ ೬೫ ಜನ ಏನು ಕಣ್ಣುಗಳನ್ನು ಕಳೆದುಕೊಂಡು ಬೀದಿ ಪಾಲಾಗಿದ್ದಾರೆ. ಅವರ ಕುಟುಂಬಗಳಿಗೆ ಸರಿಯಾದಂತಹ ಪರಿಹಾರ ಕೊಟ್ಟು

ಮಾನಸಾಶನ ಕೊಡುವಂತಹ ಯೋಜನೆ ಏನಾದರೂ ಇದೆಯೇ ? ಇವರುಗಳಿಗೆ ಕೇವಲ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದು ಸರಿಯೇ, ಇದು ಸಾಕಾಗುತ್ತದೆಯೇ ಎಂತ್ತೆ ಅಲ್ಲಿಂದ್ದಂಥ ಗಣ್ಯ ವೈದ್ಯಾಧಿಕಾರಿಯನ್ನು ಅಲ್ಲಿಂದ ವರ್ಗಾವಣೆ ಮಾಡಿದಂಥ ಸಂದರ್ಭದಲ್ಲಿ ತಕ್ಷಣ ೨೪ ಗಂಟೆಯಲ್ಲಿ ಇನ್ನೊಬ್ಬ ವೈದ್ಯಾಧಿಕಾರಿಯನ್ನು ನೇಮಕ ಮಾಡುವುದು ಸರ್ಕಾರದ ಕರ್ತವ್ಯ ಅಲ್ಲವೇ ? ಇದರ ಬಗ್ಗೆ ನಾನು ಚರ್ಚೆ ಮಾಡುತ್ತಾ ಇರುವುದು. ನಾನು ಇದನ್ನು ತಮ್ಮ ಗಮನಕ್ಕೆ ತಂದಿರುವ ಒಂದೇ ಒಂದು ಉದ್ದೇಶ ಏನೆಂದರೆ ಇವತ್ತು ಈ ಒಂದು ಐ-ಸ್ಪೆಶಲಿಸ್ಟ್ ಗಳು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಎಕ್ಸ್‌ಪರ್ಟ್ ಅಲ್ಲದೆ ಇರತಕ್ಕ ಡಾ॥ ಚಂದ್ರಿಕಾ ಅನ್ನುವವರೂ ಸಹ ಆಪರೇಷನ್ ಮಾಡಿದ್ದಾರೆ ಇದು ನಿಜವೇ ? ಈ ರೀತಿ ಯಾರು ಐ-ಸ್ಪೆಷಲಿಸ್ಟ್ ಆಗಿರುವ್ರದಿಲ್ಲ ಅಂಥವರಿಂದ ಕಣ್ಣಿನ ಆಪರೇಷನ್‌ನ್ನು ಮಾಡಿಸುತ್ತಿದ್ದಾರೆ. ಇದು ಸರಿಯಲ್ಲ. ಆದ್ದರಿಂದ ಇನ್ನುಮುಂದೆ ಇಂಥ ಘಟನೆಗಳು ಆಗದಿರುವಂತೆ ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ತಾವು ತನಿಖೆ ಮಾಡಿಸಬೇಕು. ಈಗ ಏನು ೬೫ ಸಂಸಾರಗಳು ಬೀದಿಪಾಲಾಗಿವೆ ಅವರಿಗೆ ತಕ್ಷಣ ಏನಾದರೂ ಒಂದು ವ್ಯವಸ್ಥೆ ಮಾಡಿ. ಅವರ ಜೀವನಕ್ಕೋಸ್ಕರ ತಿಂಗಳಿಗೆ ೫೦೦ ರೂಪಾಯಿಯಂತೆ ಪರಿಹಾರವನ್ನು ಸರ್ಕಾರದವರು ಕೊಡಬೇಕು. ಮಾನವೀಯತೆ ದೃಷ್ಟಿಯಿಂದಲಾದರೂ ಇದನ್ನು ಕೊಡುವುದು ಬೇಡವೆ ? ಆಪರ ಜೀವನ ನಿರ್ವಹಣೆಗೆ ಏನು ವ್ಯವಸ್ಥೆ ಮಾಡಿದ್ದೀರೆಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ತಾವು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದಕ್ಕೆ ನನಗೆ ವಿವರಣೆಯನ್ನು ಕೊಡಿ. ಇಂಥ ವಿಚಾರಕ್ಕೆ ಅಂದರೆ ಆಪರೇಷನ್‌ನ್ನು ಮಾಡಿದ ವೈದ್ಯರು ತಜ್ಞರೇ ? ಆವರಿಗೆ ಶಸ್ತ್ರ ಚಿಕಿತ್ಸೆಯನ್ನು ಹೇಗೆ ಮಾಡಿದರು ? ಶಸ್ತ್ರ ಚಿಕಿತ್ಸೆಗೆ ಉಪಯೋಗಿಸಿದ ಉಪಕರಣಗಳನ್ನು ಶುದ್ಧಿ ಮಾಡಿದ್ದರೋ, ಇಲ್ಲವೋ ? ಎಂಬ ವಿವರಗಳಿಗೆ ನಾನು ಹೋಗುವುದಿಲ್ಲ. ಈಗ ಕಣ್ಣು ಕಳೆದುಕೊಂಡಿರತಕ್ಕ ೬೫ ಕುಟುಂಬಗಳ ಸಂಸಾರಗಳು ಏನು ಬೀದಿ ಪಾಲಾಗಿವೆ ಅವುಗಳಿಗೆ ಸರ್ಕಾರದವರು ಮಾನವೀಯತೆ ದೃಷ್ಟಿಯಿಂದ ಏನು ಪರಿಹಾರವನ್ನು ಕೊಡುತ್ತೀರಿ? ಅಂದರೆ ಅವರಿಗೆ ಮಾಸಾಶನವನ್ನು ಕೊಡುವ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಇದಕ್ಕೆ ಸರ್ಕಾರದವರು ಸ್ಪಷ್ಟವಾದ ಉತ್ತರವನ್ನು ನೀಡಬೇಕಾಗಿ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಈ ಒಂದು ದುರ್ಘಟನೆ ಆಗಬಾರದಿತ್ತು. ಬಹಳ ಜನರಿಗೆ ಅಲ್ಲಿ ಕಣ್ಣಿನ ಆಪರೇಷನ್ ಆಗಿದೆ. ಕೆಲವರಿಗೆ ಕಣ್ಣಿನ ದೃಷ್ಟಿ ಬಂದಿದೆ; ಇನ್ನು ಕೆಲವರಿಗೆ ದೃಷ್ಟಿ ಬಂದಿಲ್ಲ. ಇದು ಯಾವ ಕಾರಣಕ್ಕಾಗಿ ಹೀಗೆ ಆಗಿದ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ತಜ್ಞರನ್ನು ನೇಮಕ ಮಾಡಿದ್ದೇವೆ. ಆ ತಜ್ಞರ ವರದಿ ಬಂದನಂತರ ನಾನು ತಮಗೆ ಉತ್ತರ ಕೊಡುತ್ತೇನೆ.

ಇನ್ನು ಸರ್ಕಾರದವರು ತಕ್ಷಣ ಏನು ಕ್ರಮವನ್ನು ತೆಗೆದುಕೊಂಡಿರಿ ಎಂಬ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ನಾನು ಒಷಯ ತಿಳಿದ ಕೂಡಲೇ ಚಿಂತಾಮಣಿಗೆ ಹೋಗಿ ಅಲ್ಲಿನ ಆಸ್ಪತ್ರೆ ಮತ್ತು ಯಾವ ಛತ್ರದಲ್ಲಿ ಕಣ್ಣಿನ ಆಪರೇಷನ್‌ನ್ನು ಮಾಡಲಾಗಿತ್ತು ಅದನ್ನೆಲ್ಲಾ ನೋಡಿಕೊಂಡು ಬಂದೆ. ಆಪರೇಷನ್ ಆಗಿರತಕ್ಕವರನ್ನು ನೋಡಿಕೊಳ್ಳುವುದಕ್ಕಾಗಿ ೪ ಪಂಡಗಳಲ್ಲಿ ನಾನು ತಜ್ಞರನ್ನು ಕಳುಹಿಸಿ ಕೊಟ್ಟಿದ್ದೇನೆ. ನಂತರ ವಿಂಟೋ ಆಸ್ಪತ್ರೆಯಲ್ಲಿ ಇವರಿಗಾಗಿಯೇ ೨ ವಾರ್ಡ್‌ಗಳನ್ನು ಇಟ್ಟು ಸಂಪೂರ್ಣ ಔಷಧೋಪಚಾರವನ್ನು ಮಾಡುವುದರ ಜೊತೆಗೆ ಇವರಿಗೆ ಊಟ ಮತ್ತು ಇವರ ಜೊತೆಯಲ್ಲಿ ನೋಡಿಕೊಳ್ಳಲು ಬಂದಿರುವವರಿಗೆ ಊಟದ ವ್ಯವಸ್ಥೆಯನ್ನೂ ಕೂಡ ಮಾಡಿದ್ದೇವೆ. ಒಬ್ಬರು ಕಣ್ಣಿನ ದೋಷ ಇನ್ನೊಂದು ಕಣ್ಣಿಗೆ ಹರಡದಂತೆ ನೋಡಿಕೊಳ್ಳಲು ಮನ್ಮೆಚ್ಚರಿಕೆ ಕ್ರಮ ತೆಗೆದುಕೊಂಡಿದೆ. ಈಗ ಮಾನ್ಯ ಮುಖ್ಯ ಮಂತ್ರಿಗಳ ನಿಧಿಯಿಂದ ೧೦೦೦ ರೂಪಾಯಿಗಳನ್ನೂ ಮತ್ತು ನಮ್ಮ ಸಂಸ್ಥೆಯಿಂದ ೫೦೦ ರೂಪಾಯಿಗಳನ್ನೂ ಅಂದರೆ ಒಟ್ಟು ೧೫೦೦ ರೂಪಾಯಿಗಳನ್ನು ತೊಂದರೆಗೊಳಗಾದವರಿಗೆ ಕೊಡಲು ಆದೇಶ ನೀಡಿದ್ದೇವೆ.

ಇನ್ನು ಯಾರು ಬಡತನದ ರೇಖೆಯಿಂದ ಕೆಳಗಿದ್ದಾರೆ, ಯಾರು ನಿರ್ಗತಿಕರಿದ್ದಾರೆ ಅವರಿಗೆ ಯಾವ ರೀತಿಯಲ್ಲಿ ಹೆಚ್ಚಿನ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಯಾರು ಕಣ್ಣನ್ನು ಕಳೆದುಕೊಂಡಿದ್ದಾರೆ ಅಂಥವರಿಗೆ ತಿಂಗಳಿಗೆ ೬೦ ರೂಪಾಯಿ ಮಾಸಾಶನ ಕೊಡಬೇಕೆಂದು ತಾತ್ಕಾಲಿಕವಾಗಿ ನಾವು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇಂಥ ದುರ್ಘಟನೆ ಭಾರತದಲ್ಲಿ ಬೇರೆ ಕಡೆ ಎಲ್ಲೂ ಆಗಿಲ್ಲ. ದುರದೃಷ್ಟ ವಶಾತ್ ನಮ್ಮ ಕರ್ನಾಟಕದಲ್ಲಿ ಇದು ಆಗಿದೆ. ಇನ್ನು ಮುಂದೆ ಇಂಥಾದ್ದು ಆಗದಂತೆ ನೋಡಿಕೊಳ್ಳಬೇಕಾದರೆ ನಾವು ಏನು

ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳಲು ತಜ್ಞರನ್ನು ನೇಮಕ ಮಾಡಿದ್ದೇವೆ. ಆ ತಜ್ಞರ ವರದಿ ಬಂದಮೇಲೆ ಯಾವ ವೈದ್ಯರು ತಪ್ಪು ಮಾಡಿದ್ದಾರೆ ಅವರ ವಿರುದ್ಧ ಕ್ರಮ ತೆಗೆದುಕೊಂಡು ಶಿಕ್ಷೆ ವಿಧಿಸುವುದಕ್ಕೆ ಸಿದ್ಧರಿದ್ದೇವೆ. ಈಗ ನಾವು ತಜ್ಞರ ವರದಿಗಾಗಿ ಕಾಯುತ್ತಿದ್ದೇವೆ. ನಾವು ಯಾವಾಗಲೂ ಯಾರ ದಾಕ್ಷಿಣ್ಯಕ್ಕೂ ಒಳಗಾದವರಲ್ಲ.

ಮಾನ್ಯ ಅಧ್ಯಕ್ಷರೆ, ನಾನಾದರೂ ಹೇಳುವುದಿಷ್ಟೆ. ಈಗಾಗಲೇ ನಾವು ತಜ್ಞರನ್ನು ಏನು ನೇಮಕ ಮಾಡಿದ್ದೇವೆ ಅವರು ಬಂದಿದ್ದಾರೆ. ಇನ್ನು ಒಂದೆರಡು ತಿಂಗಳಲ್ಲಿ ತಮ್ಮ ಪೂರ್ಣ ವರದಿಯನ್ನು ಕೊಡುತ್ತಾರೆ. ನಂತರ ಅದರ ಬಗ್ಗೆ ಮುಂದಿನ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಈ ಉದ್ದೇಶದಿಂದಲೇ ನಾನು ಇಲ್ಲಿ ತಮಗೆ ಪೂರ್ಣವಾದ ಹೇಳಿಕೆಯನ್ನು ಕೊಡಲಿಲ್ಲ. ನಾವು ಏನು ಕ್ರಮವನ್ನು ತೆಗೆದುಕೊಂಡಿದ್ದೇವೆಂಬುದನ್ನು ತಮಗೆ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿದ್ದೇನೆ. ತಪ್ಪು ಮಾಡಿರತಕ್ಕ ಐ–ಸ್ಪೆಷಲಿಸ್ಟ್ ಯಾರಿದ್ದಾರೆ ಅವರ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳುವುದಕ್ಕೆ ನೀವು ಏನು ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ಹೇಳಬೇಕು. ನೀವು ಕ್ರಮ ತೆಗೆದುಕೊಳ್ಳದಿದ್ದರೆ ಜನರು ನಿಮ್ಮ ಬಗ್ಗೆ ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಯಾರೂ ಕೂಡ ಆಸ್ಪತ್ರೆಗಳಿಗೆ ಬರುವುದಿಲ್ಲ.

ಸರ್ಕಾರ ಬದುಕಿದೆ ಎಂದು ಹೇಳುವುದಾದರೆ ಉಚಿತ ನೇತ್ರ ಚಿಕಿತ್ಸೆಯಿಂದ ಲಕ್ಷ ಜನ ಏನು ಕಣ್ಣು ಕಳೆದುಕೊಂಡಿರುತ್ತಾರೆ ಅವರಿಗೆ ಮಾನವೀಯತೆಯ ದೃಷ್ಟಿಯಿಂದ ಸೂಕ್ತ ಪರಿಹಾರವನ್ನು ಕೊಡಬೇಕು. ಸರ್ಕಾರದ ಒಂದು ಬೇಜವಾಬ್ದಾರಿಯಿಂದ ಎರಡು ಕಣ್ಣುಗಳನ್ನು ಕೂಡ ಕಳೆದುಕೊಂಡವರು ಇರುತ್ತಾರೆ. ತಾವು ಹೇಳಿದಂತೆ ಇದಕ್ಕೆ ಯಾರು ಕಾರಣರು ಇರುತ್ತಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಅದನ್ನು ನೀವು ಮಾಡುತ್ತೀರಿ ಎಂಬ ಭರವಸೆಯೂ ಕೂಡ ಇದೆ. ತಮ್ಮಲ್ಲಿ ನಾನು ಈಗ ವಿನಂತಿ ಮಾಡಿಕೊಳ್ಳುವುದೇನೆಂದರೆ ಅವರು ಕಡುಬಡವರು ಇರುತ್ತಾರೆ. ಕೊನಪಕ್ಷ ಅವರಿಗೆ ಹತ್ತು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುವುದರ ಜೊತೆಗೆ ಮಾಸಾಶನವನ್ನು ಕೂಡ ಕೊಡಬೇಕು. ಸರ್ಕಾರ ಇದೆ ಎನ್ನುವುದಾದರೆ ಇಷ್ಟರಮಟ್ಟಿಗೆ ನ್ಯಾಯವಾದ ಉತ್ತರ ಬರಬೇಕಾಗಿತ್ತು. ಪರಿಹಾರವಾಗಿ ಪ್ರತಿಯೊಂದಕ್ಕೆ ೫೦–೬೦ ರೂಪಾಯಿಗಳನ್ನು ಕೊಟ್ಟರೆ ಅವರಿಗೆ ಒಂದು ಹೊತ್ತು ಊಟಕ್ಕೂ ಕೂಡ ಸಾಕಾಗುವುದಿಲ್ಲ. ಆದ್ದರಿಂದ ಅವರಿಗೆ ಐದುನೂರು ರೂಪಾಯಿಗಳನ್ನು ಮಾಸಾಶನ ಕೊಡುವುದರ ಜೊತೆಗೆ ಲೈಯರ ಟ್ರೀಟ್‌ಮೆಂಟ್ ಕೂಡ ಕೊಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಎರಡನೆಯದಾಗಿ ಅಲ್ಲಿ ಜಗನ್ನಾಥಶೆಟ್ಟಿ ಎಂದು ಐ–ಸ್ಪೆಷಲಿಸ್ಟ್ ಇದ್ದರು ಅವರನ್ನು ಈ ಘಟನೆಯಾದ ಮೇಲೆ ವರ್ಗಾವಣೆ ಮಾಡಿರುತ್ತಾರೆ. ವರ್ಗಾವಣೆಯನ್ನು ಮಾಡಿದ ಮೇಲೆ ಬೇರೆಯವರನ್ನು ಇದುವರೆವಿಗೂ ಹಾಕಿಲ್ಲ. ಅಲ್ಲಿರುವವರ ಮೇಲೆ ಕಳಕಳಿ ಇದ್ದರೆ ೨೪ ಘಂಟೆಗಳಲ್ಲಿ ಬೇರೆಯವರನ್ನು ಹಾಕಬಹುದಾಗಿತ್ತು.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ ತಾವು ನೇರವಾಗಿ ಕೇಳಿ? ಈ ರೀತಿಯಾಗಿ ಭಾಷಣ ಮಾಡಿದರೆ ಏನು ಮಾಡಬೇಕು.

ಶ್ರೀ ಬಿ ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ನಾನು ಹೇಳುತ್ತಿರುವುದಾದರೂ ಇಷ್ಟೇ. ಕಡುಬಡವರು, ಕಣ್ಣನ್ನು ಕಳೆದುಕೊಂಡಿರುವವರಿಗೆ ಸೂಕ್ತ ಪರಿಹಾರವನ್ನು ಕೊಡುವುದರ ಜೊತೆಗೆ ಐದುನೂರು ರೂಪಾಯಿಗಳ ಮಾಸಾಶನವನ್ನು ಕೊಡಬೇಕು ಮತ್ತು ಅಲ್ಲಿಗೆ ಕೂಡಲೇ ವೈದ್ಯಕೀಯ ಡಾಕ್ಟರನ್ನು ಹಾಕಬೇಕೆಂದು ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ನೇರವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಸಂಚಾರಿ ವೈದ್ಯಕೀಯ ಕಣ್ಣು ಆಸ್ಪತ್ರೆಯಲ್ಲಿ ಕೆಲಸ ಮಾಡತಕ್ಕಂಥ ಡಾಕ್ಟರನ್ನು ಬೇರೆ ಕಡೆ ವರ್ಗ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಜಗನ್ನಾಥಶೆಟ್ಟಿ ಎಂದು ಇದ್ದಾರೆ.

ಶ್ರೀ ಬಿ. ರಾಚಯ್ಯ.—ಸಂಚಾರಿ ಕಣ್ಣಾಸ್ಪತ್ರೆಯಲ್ಲಿ ಡಾ. ತಿಮ್ಮಶೆಟ್ಟಿ ಎಂಬುವರು ಕೆಲಸ ಮಾಡುತ್ತಿದ್ದಾರೆ. ಡಾ. ಜಗನ್ನಾಥ ಶೆಟ್ಟಿಯವರಲ್ಲ. ಡಾ. ತಿಮ್ಮಶೆಟ್ಟಿಯವರು ಉತ್ತಮ ದಕ್ಷ ವೈದ್ಯರೆಂದು ಹೆಸರು ಪಡೆದಿದ್ದಾರೆ. ಅವರು ಅನೇಕ ಕಡೆಗಳಲ್ಲಿ ನೇತ್ರ ಶಸ್ತ್ರಚಿಕಿತ್ಸೆ ಮಾಡಿದ್ದಾರೆ

ಅವರ ವಿಷಯದಲ್ಲಿ ಹೇಳಬೇಕಾದ್ದು ಏನೂ ಇಲ್ಲ. ತಜ್ಞರಿಂದ ಬರತಕ್ಕಂಥ ವರದಿಗಾಗಿ ಕಾದಿದ್ದೇವೆಯೇ ವಿನಃ ಬೇರೆ ಏನೂ ಇಲ್ಲ. ಒಂದು ಕಡೆ ಈ ರೀತಿಯಾದ ವರದಿ ಇದ್ದರೆ ಇನ್ನೊಂದು ಕಡೆ ಈ ರೀತಿಯಾದ ಅಪಘಾತವಾಗಿದೆ. ಆದ್ದರಿಂದ ತಜ್ಞರಿಂದ ವರದಿ ಬಂದರೆ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನವೀಯತೆಯ ದೃಷ್ಟಿಯಿಂದ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಬಿ. ರಾಚಯ್ಯ.—ಮಾನವೀಯತೆಯ ದೃಷ್ಟಿಯಿಂದಲೇ ಈ ವಿಷಯದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ. ಸುಮಾರು ೬೫ ಜನ ಕಣ್ಣು ಆಪರೇಷನ್ ಆಗಿರುವವರ ಪೈಕಿ ಪರದಿ ಬಂದಿರುವ ಪ್ರಕಾರ ೪ ಜನರಿಗೆ ಮಾತ್ರ ಪೂರ್ಣವಾಗಿ ಕಣ್ಣು ಕಾಣುವುದಿಲ್ಲ ವೆಂದು ಹೇಳಿದ್ದಾರೆ. ಒಂದೊಂದೇ ಕಣ್ಣು ಆಪರೇಷನ್ ಮಾಡಿರುವುದು. ಇನ್ನೊಂದು ಕಣ್ಣನ್ನು ಆಪರೇಷನ್ ಮಾಡಿಲ್ಲ. ಆದಕ್ಕಾಗಿಯೇ ಪೂರ್ಣ ವಿಫರಕ್ಕೆ ನಾನು ಹೋಗುವುದಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ಈ ದೃಷ್ಟಿಯಿಂದ ಸಾಧ್ಯವಾದ ಮಟ್ಟಿಗೆ ಯಾರು ಬಡವರು ಕಣ್ಣು ಕಳೆದು ಕೊಂಡಿರುತ್ತಾರೋ ಅವರ ಬಗ್ಗೆ ಅನುಕಂಪವಿಟ್ಟುಕೊಂಡು ಪರಿಹಾರವನ್ನು ಕೊಡಲು ಯಾವ ರೀತಿ ಪ್ರಯತ್ನ ಮಾಡಬೇಕೋ ಆ ರೀತಿ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡುತ್ತೇನೆ.

೨. ಲೋಕಸಭಾ ಸದಸ್ಯ ಡಾ. ವಿ. ವೆಂಕಟೇಶ್‌ರವರನ್ನು ಶೇಷಾದ್ರಿಪುರಂ ಪೋಲೀಸ್ ಠಾಣೆಯಂ ಆರಕ್ಷಕ ಉಪ ನಿರೀಕ್ಷಕರು ಥಳಿಸಿರುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ದಿನಾಂಕ ೬-೩-೧೯೮೮ರಂದು ಲೋಕಸಭಾ ಸದಸ್ಯರಾದ ಡಾ. ವೆಂಕಟೇಶ್ ಅವರನ್ನು ಶೇಷಾದ್ರಿಪುರದ ಪೋಲೀಸ್ ಠಾಣೆಯ ಉಪ ನಿರೀಕ್ಷಕರು ಥಳಿಸಿರುವುದರ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ

ಶ್ರೀ ಆರ್ ಎಲ್. ಜಾಲಪ್ಪ (ಗೃಹ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ದಿನಾಂಕ ೬-೩-೧೯೮೮ರಂದು ಕೋಲಾರ ಲೋಕಸಭಾ ಸದಸ್ಯರಾದ ಡಾ. ವೆಂಕಟೇಶ್ ಇವರು ತಮ್ಮ ಸಂಗಡಿಗರು ಸುಮಾರು ೨೫೦ ಜನರೊಂದಿಗೆ ''ರೈಲ್ ರೋಕೋ'' ಚಳುವಳಿ ಮಾಡಲು ಬೆಳಿಗ್ಗೆ ೮-೩೦ಕ್ಕೆ ನಗರ ರೈಲು ನಿಲ್ದಾಣದ ಬಳಿ ಬಂದಿದ್ದರು. ಚಳುವಳಿಯು ಸಮಯದಲ್ಲಿ ರಕ್ಷಣಾ ವ್ಯವಸ್ಥೆಗಾಗಿ ರೈಲ್ವೆ ಪೋಲೀಸ್‌ರು ಮತ್ತು ಇವರ ಬೆಂಬಲಕ್ಕಾಗಿ ನಗರ ಪೋಲೀಸರು ಸ್ಥಳದಲ್ಲಿ ಹಾಜರಿದ್ದರು. ಲಕ್ಷ್ಮೀಪುರಂ ಗೂಡಿಸಲುಗಳ ಹತ್ತಿರ ಶೇಷಾದ್ರಿಪುರಂ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀ ಚಂದ್ರೇಗೌಡ ತಮ್ಮ ಸಿಬ್ಬಂದಿಯೊಂದಿಗೆ ಗಸ್ತು ತಿರುಗುತ್ತಿದ್ದರು, ಆಗ ಚಳುವಳಿಗಾರರಲ್ಲಿ ಕೆಲವರು ಲಕ್ಷ್ಮೀಪುರಂ ಗೂಡಿಸಲಿನ ಬಳಿ ಹಳಿಯ ಮೇಲೆ ಕಲ್ಲಿನ ಬಂಡೆಗಳನ್ನು ಇಡುತ್ತಿದ್ದರು. ಸಬ್‌ಇನ್ಸ್‌ಪೆಕ್ಟರ್ ಚಂದ್ರೇಗೌಡ ಮತ್ತು ಕಾನ್ಸ್‌ಟೇಬಲ್ ಶ್ರೀ ರಾಮಾನಾಯಕ್, ಚಳುವಳಿಗಾರರು ಕಲ್ಲಿನ ಬಂಡೆಗಳನ್ನು ಹಳಿಗಳ ಮೇಲೆ ಇಡುವುದನ್ನು ತಪ್ಪಿಸಲು ಪ್ರಯತ್ನಪಟ್ಟಾಗ ಚಳುವಳಿಗಾರರ ಮತ್ತು ಪೋಲೀಸರ ನಡುವೆ ಎಳೆದಾಟ ನಡೆಯಿತು. ಉದ್ರಿಕ್ತಗೊಂಡ ಚಳುವಳಿಗಾರರನ್ನು ಹತೋಟಿಗೆ ತರಲು ಸಬ್ ಇನ್ಸ್‌ಪೆಕ್ಟರ್ ಬಲ ಉಪಯೋಗ ಮಾಡಬೇಕಾಗಿ ಬಂತು. ಈ ಎಳೆದಾಟದಲ್ಲಿ ಲೋಕಸಭಾ ಸದಸ್ಯರಾದ ಡಾ. ವೆಂಕಟೇಶ್ ಹಳಿಯ ಮೇಲೆ ಬಿದ್ದರು, ಆಷ್ಟೊತ್ತಿಗೆ ರೈಲ್ವೆ ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಡಾ. ವೆಂಕಟೇಶ್ ಮತ್ತು ಅವರ ಅನುಯಾಯಿಗಳನ್ನು ಪ್ರತಿಬಂಧಕ ದಸ್ತಗಿರಿ ಮಾಡಿ ಕರೆದುಕೊಂಡು ಹೋದರು.

ಮುಂದೆ ಡಾ. ವೆಂಕಟೇಶ್‌ರವರು ತಮ್ಮ ಎದೆಯಲ್ಲಿ ನೋವಿದೆಯೆಂದು ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಹೋಗಿದ್ದರು, ತಮ್ಮೊಂದಿಗೆ ಸಬ್ ಇನ್ಸ್‌ಪೆಕ್ಟರ್ ಚಂದ್ರೇಗೌಡ ಮತ್ತು ಕಾನ್ಸ್‌ಬೇಬಲ್ ರಾಮಾನಾಯ್ಕ ಅವಮರ್ಯಾದೆಯಿಂದ ವರ್ತಿಸಿ ದೌರ್ಜನ್ಯ ಮಾಡಿರುತ್ತಾರೆಂದು ಅರ್ಜಿಯನ್ನು ಕೊಟ್ಟಿರುತ್ತಾರೆ. ಸದರಿ ಅರ್ಜಿಯನ್ನು ಶೇಷಾದ್ರಿಪುರಂ ಸಹಾಯಕ ಪೋಲೀಸ್ ಕಮಿಷನರ್‌ರಿಂದ